ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156
(ನ್ಯಾಕ್‌ಮಾನ್ಯತೆ ಬಿ+ ಗ್ರೇಡ್-2021) ಪಿಎಂ-ಉಷಾ (ಮೇರು)
**(ಹಿಂದಿನ ಪದನಾಮ – 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')**

**KITTURU RANI CHANNAMMA UNIVERSITY**
Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade – 2021) PM-UShA (MERU)
***(Formerly known as 'Rani Channamma University, Belagavi')***

**Email:** registrar@rcub.ac.in | ಕುಲಸಚಿವರ ಕಾರ್ಯಾಲಯ | **Website:** www.rcub.ac.in
**Office of the Registrar** | **Phone No.: 0831-2565234**

ಕ್ರ. ಸಂ: ಕಿರಾಚವಿ/ಬೆಳಗಾವಿ/ಕುಸಕಾ/ಜಿಎಡಿ/2026-27/2840 ದಿನಾಂಕ: 24/08/2026

## ಸುತ್ತೋಲೆ

**ವಿಷಯ: "ವಿಜ್ಞಾನ ಸಂಗಮ", ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಹೀರೆಬಾಗೇವಾಡಿಗೆ** ಆಗಮಿಸಲು **ಬಸ್ ವ್ಯವಸ್ಥೆ** ಕಲ್ಪಿಸಿರುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **"ವಿಜ್ಞಾನ ಸಂಗಮ"**, ಹೀರೆಬಾಗೇವಾಡಿ ಆವರಣಕ್ಕೆ ಆಗಮಿಸುವ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರು, ಸಿಬ್ಬಂದಿ, ವಿದ್ಯಾರ್ಥಿಗಳು, ಪಾಲಕರುಗಳು ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು **ದಿನಾಂಕ: 01-09-2026 ರಿಂದ "ವಿಜ್ಞಾನ ಸಂಗಮ", ಹೀರೆಬಾಗೇವಾಡಿಯಲ್ಲಿ ವಿಜ್ಞಾನ ಅಧ್ಯಯನ ವಿಭಾಗಗಳ ಕಾರ್ಯಾರಂಭವಾಗಲಿವೆ.** ಆದ್ದರಿಂದ, ಬೆಳಗಾವಿ ನಗರದಿಂದ **"ವಿಜ್ಞಾನ ಸಂಗಮ"** ಮುಖ್ಯ ಆವರಣಕ್ಕೆ ಆಗಮಿಸುವವರು ಹೀರೆಬಾಗೇವಾಡಿ ಮಾರ್ಗವಾಗಿ ಸಂಚರಿಸುವ ಬಸ್‌ಗಳಲ್ಲಿ **(ತಡೆರಹಿತ ಹೊರತುಪಡಿಸಿ)** ಪ್ರಯಾಣಿಸಿ, ಹೀರೆಬಾಗೇವಾಡಿಯ **"ಬಸವೇಶ್ವರ ವೃತ್ತ (Circle)"**ದಲ್ಲಿ ಇಳಿದು, ಅಲ್ಲಿಂದ **"ವಿಜ್ಞಾನ ಸಂಗಮ"** ಮುಖ್ಯ ಆವರಣಕ್ಕೆ ಆಗಮಿಸಲು **KSRTC, ಬೆಳಗಾವಿ** ವತಿಯಿಂದ ಬಸ್‌ಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಮುಂದುವರಿದು, ಧಾರವಾಡ ಹಾಗೂ ಕಿತ್ತೂರು ಮಾರ್ಗವಾಗಿ ಆಗಮಿಸುವವರು **ಹೀರೆಬಾಗೇವಾಡಿ ಟೋಲ್‌ಗೇಟ್ ದಾಟಿದ ನಂತರ ಹೀರೆಬಾಗೇವಾಡಿ APMC ಬಸ್ ನಿಲ್ದಾಣದಲ್ಲಿ ಇಳಿದು**, ಅಲ್ಲಿಂದ **APMC ಮಾರ್ಗವಾಗಿ ಸಂಚರಿಸುವ ಬಸ್‌ಗಳಲ್ಲಿ** ಪ್ರಯಾಣಿಸಿ **"ವಿಜ್ಞಾನ ಸಂಗಮ"** ಮುಖ್ಯ ಆವರಣಕ್ಕೆ ಆಗಮಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.

ಆದ್ದರಿಂದ, **"ವಿಜ್ಞಾನ ಸಂಗಮ"ಕ್ಕೆ** ಆಗಮಿಸುವವರು ಪ್ರಾಚಾರ್ಯರು, ಸಿಬ್ಬಂದಿ, ವಿದ್ಯಾರ್ಥಿಗಳು, ಪಾಲಕರುಗಳು ಹಾಗೂ ಸಾರ್ವಜನಿಕರು **KSRTC, ಬೆಳಗಾವಿ** ವತಿಯಿಂದ ಕಲ್ಪಿಸಿರುವ ಬಸ್‌ಗಳ ಸೌಲಭ್ಯವನ್ನು ಬಳಸಿಕೊಂಡು ಮುಖ್ಯ ಆವರಣಕ್ಕೆ ಆಗಮಿಸುವಂತೆ ಈ ಮೂಲಕ ತಿಳಿಸಲಾಗಿದೆ.

**ಹೆಚ್ಚಿನ ಮಾಹಿತಿಗಾಗಿ:**

ಸಾರಿಗೆಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳಿದ್ದಲ್ಲಿ ವಿಶ್ವವಿದ್ಯಾಲಯದ **ಸಾರ್ವಜನಿಕ ಸಂಪರ್ಕಾಧಿಕಾರಿಗಳು** ಮೊ: 87625 43494 ಇವರನ್ನು ಸಂಪರ್ಕಿಸಲು ಕೋರಿದೆ.

**ಸಂತೋಷ ಕಾಮಗೌಡ,** ಕೆ.ಎ.ಎಸ್.
**ಕುಲಸಚಿವರು**
ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

**ಇವರಿಗೆ,**

1. ಎಲ್ಲಾ ನಿಖಾಯಗಳ ಡೀನರುಗಳು, ಕಿರಾಚವಿ, ಬೆಳಗಾವಿ.
2. ಮುಖ್ಯಸ್ಥರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕಿರಾಚವಿ, ಬೆಳಗಾವಿ (ವಿದ್ಯಾಸಂಗಮ & ವಿಜ್ಞಾನ ಸಂಗಮ).
3. ಮುಖ್ಯಸ್ಥರು, ಎಲ್ಲಾ ಆಡಳಿತ ವಿಭಾಗಗಳು, ಕಿರಾಚವಿ, ಬೆಳಗಾವಿ (ವಿದ್ಯಾಸಂಗಮ & ವಿಜ್ಞಾನ ಸಂಗಮ).
4. ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ಮುಂದುವರೆದಿದೆ..

5. ಎಲ್ಲಾ ಅಧ್ಯಯನ ವಿಭಾಗಗಳ ಸಂಶೋಧನಾ/ಸ್ನಾತಕೋತ್ತರ ವಿದ್ಯಾರ್ಥಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
   ಪ್ರಾಚಾರ್ಯರು, ಸಂಯೋಜಿತ ಮಹಾವಿದ್ಯಾಲಯಗಳು ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆ.
6. ರಕ್ಷಾ ಪ್ರತಿ.

**ಪ್ರತಿ ಮಾಹಿತಿಗಾಗಿ:**

1. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಸಚಿವಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ಕಿತ್ತೂರು ... ವಿದ್ಯಾಲಯ